ಫ್ಯಾಕ್ಸ್ / Fax : 080-25586321
ಈಮೇಲ್ / E-mail : ho@kspcb.gov.in
ವೆಬ್‌ಸೈಟ್ / Website : http://kspcb.gov.in

25581383, 25589112
25588151, 25588270
25588142, 25586520

# ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ
# Karnataka State Pollution Control Board

"ಪರಿಸರಭವನ", 1 ರಿಂದ 5ನೇ ಮಹಡಿಗಳು, ನಂ.49, ಚರ್ಚ್‌ಸ್ಟ್ರೀಟ್, ಬೆಂಗಳೂರು - 560 001, ಕರ್ನಾಟಕ, ಭಾರತ
"Parisara Bhavana", 1st to 5th Floor, # 49, Church Street, Bengaluru - 560 001, Karnataka, INDIA

ಸಂಖ್ಯೆ:ಮಾನಿಮಂ/ಹಿಪಅ(ಜಾಗೃತಿ)/21/ಜಾ.ಕೋ/2020-21/ 1373 ದಿನಾಂಕ 28 JUL 2020

**ದಿನಾಂಕ 15/07/2020 ರಂದು 3ನೇ ಮಹಡಿ, ಸಭೆಯ ಸಭಾಂಗಣ, ಪರಿಸರ ಭವನ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಬೆಂಗಳೂರು, ಇಲ್ಲಿ ನಡೆದ 22ನೇ ಜಾಗೃತಿ ಸಮಿತಿ ಮತ್ತು ಗ್ರಂಥಾಲಯ ಸಭೆಯ ನಡವಳಿ.**

ರವಾನಿಸಲಾಗಿದೆ

**ವಿಷಯ:** 22ನೇ ಜಾಗೃತಿ ಮತ್ತು ಗ್ರಂಥಾಲಯ ಸಭೆಯ ದಿನಾಂಕ 15-07-2020 ಕ್ಕೆ ಸಂಬಂಧಿಸಿದಂತೆ, ಜಾಗೃತಿ ಸಭೆಯಲ್ಲಿ ಚರ್ಚಿಸಿದ ವಿಷಯಗಳು.

**ಉಲ್ಲೇಖ:** ಸಂಖ್ಯೆ:ಮಾನಿಮಂ/21/ಜಾ.ಕೋ/2016-17/ ದಿನಾಂಕ 14/07/2020.

**ಹಾಜರಿದ್ದ ಸದಸ್ಯರುಗಳು ಮತ್ತು ಆಹ್ವಾನಿತರು** (ಲಗತ್ತಿಸಿದೆ Attendance Abstract)

1. ಸದಸ್ಯ ಕಾರ್ಯದರ್ಶಿ – ಅಧ್ಯಕ್ಷರು
2. ಮುಖ್ಯ ಪರಿಸರ ಅಧಿಕಾರಿ-1 – ಸದಸ್ಯರು
3. ನಾಗೇಶ್ ಹೆಗಡೆ – ಸದಸ್ಯರು
4. ಶ್ರೀಮತಿ ಸುಮಂಗಲ ಮಮ್ಮಿಗಟ್ಟಿ – ಸದಸ್ಯರು
5. ಹಿರಿಯ ಪರಿಸರ ಅಧಿಕಾರಿ (ಜಾ.ಕೋ) – ಸದಸ್ಯ ಸಂಚಾಲಕರು

**ಉಪಸ್ಥಿತ ಅಧಿಕಾರಿಗಳು:**

1. ಪರಿಸರ ಅಧಿಕಾರಿ-2, ಜಾಗೃತಿ ವಿಭಾಗ – ಶ್ರೀ ವಿ.ರಮೇಶ್
2. ಸಾರ್ವಜನಿಕ ಸಂಪರ್ಕಾಧಿಕಾರಿ – ಶ್ರೀ ಕೆ.ಪಿ.ದಿನೇಶ್

ಆಹ್ವಾನಿತರು

1. ಶ್ರೀ **ಶಿವಕುಮಾರ್** ಹೊಸಮನಿ – NGO
2. ಶ್ರೀ **ಸಂತೋಷ್** ಮತ್ತು ಮಂಜುನಾಥ್ – CEE
3. ಶ್ರೀಮತಿ ಅನುಪಮ –ಆಕಾಶವಾಣಿ

**-**-**-**

ಸದಸ್ಯ ಸಂಚಾಲಕರು ಸಭೆಯಲ್ಲಿದ್ದ ಸದಸ್ಯರನ್ನು ಸ್ವಾಗತಿಸಿ ಜಾಗೃತಿ ಮತ್ತು ಗ್ರಂಥಾಲಯದ ಸಮಿತಿಗೆ 229ನೇ ಮಂಡಳಿಯ ಸಭೆಯಲ್ಲಿ ಪುನರ್‌ರಚನೆ ಮಾಡಿರುವ ಕುರಿತು ಸಭೆಗೆ ತಿಳಿಸಿದರು. ವಿಶೇಷವಾಗಿ ಈ ಜಾಗೃತಿ ಸಮಿತಿಯಲ್ಲಿ ಗ್ರಂಥಾಲಯವೂ ಕೂಡ ಸೇರಿಸಲ್ಪಟ್ಟಿರುವುದಾಗಿ ತಿಳಿಸಿದರು. ಈ ಹಿನ್ನೆಲೆಯಲ್ಲಿ ಸಭೆಯನ್ನು ಅನುಬಂಧ 1 ಮತ್ತು 2 ರ ವಿಷಯಗಳನ್ನು ಚರ್ಚಿಸಲು ಸಮಿತಿಯ ಮುಂದೆ ತರಲಾಗಿದೆ ಎಂದು ತಿಳಿಸುತ್ತಾ ಸಭೆಯನ್ನು ಸದಸ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ನಡೆಸಬೇಕೆಂದು ಕೋರಿದರು.

ಸಭೆಯ ಸಂಚಾಲಕರು ಅಧ್ಯಕ್ಷರು

1. **ಗಣೇಶ ಹಬ್ಬವನ್ನು ಆಚರಿಸುವ ಸಲುವಾಗಿ ಮಂಡಳಿಯಿಂದ ಪರಿಸರ ಜಾಗೃತಿಯನ್ನು ಮೂಡಿಸುವ ಬಗ್ಗೆ :**

ಪ್ರತಿ ವರ್ಷವೂ ಮಂಡಳಿಯು ಗಣೇಶ ಹಬ್ಬ ಆಚರಣೆಯಿಂದ ಮತ್ತು ಗಣೇಶನ ವಿಗ್ರಹಗಳನ್ನು ಕೆರೆಯಲ್ಲಿ ಬಿಡುವುದರಿಂದ ಜಲಮಾಲಿನ್ಯವಾಗುತ್ತಿರುವ ಬಗ್ಗೆ ಜಾಗೃತಿಯನ್ನು ಕಳೆದ ಹಲವಾರು ವರ್ಷಗಳಿಂದ ಪರಿಸರ ಜಾಗೃತಿ ಮೂಡಿಸುವ ಕಾರ್ಯಕ್ರಮಗಳನ್ನು ನಡೆಸುತ್ತಿರುತ್ತದೆ.

ಆದರೆ ಪ್ರಸ್ತುತ ವರ್ಷದಲ್ಲಿ ಕೋವಿಡ್-19 ರ ಹಿನ್ನೆಲೆಯಲ್ಲಿ ಈ ವರ್ಷ ಸಾರ್ವಜನಿಕ ಗಣೇಶ ಉತ್ಸವಗಳನ್ನು ಸರ್ಕಾರದಿಂದ ತಡೆ ಎಂಬುವುದಾಗಿ ದಿನಾಂಕ 14/07/2020 ರಲ್ಲಿ ಕನ್ನಡ ಪ್ರಭ ದಿನಪತ್ರಿಕೆಯಲ್ಲಿ ಮಾನ್ಯ ಮುಖ್ಯಮಂತ್ರಿಗಳು ವರದಿ ನೀಡಿರುವುದಾಗಿ ವರದಿಯಾಗಿರುತ್ತದೆ. ಸಾರ್ವಜನಿಕವಾಗಿ ಆಚರಣೆ ಮಾಡುವುದರಿಂದ ಸೋಂಕು ಹರಡುವ ಹಿನ್ನೆಲೆಯಲ್ಲಿ ಸಾರ್ವಜನಿಕವಾಗಿ ಉತ್ಸವಗಳ ಆಚರಣೆ ಮಾಡದಂತೆ ಸೂಚಿಸಿರುವುದಾಗಿ ವರದಿಯಾಗಿದೆ. ಈ ಹಿನ್ನೆಲೆಯಲ್ಲಿ ಮಂಡಳಿಯು ಈ ವರ್ಷ ಗಣಪತಿ ಹಬ್ಬದ ಆಚರಣೆಯ ಸಂದರ್ಭದಲ್ಲಿ

- POP ರಹಿತ ಗಣೇಶ ಮೂರ್ತಿಯನ್ನು ಮತ್ತು ಮಣ್ಣಿನಿಂದ ಅಥವಾ ಅರಿಶಿನದಿಂದ ಮಾಡಿದ ಗಣೇಶ ಮೂರ್ತಿಯನ್ನು ಮಾಡಲು ಪ್ರೇರೇಪಿಸಬೇಕಾಗಿರುತ್ತದೆ.

  ಆದುದರಿಂದ ಈ ವರ್ಷ ಪರಿಸರ ಜಾಗೃತಿಯನ್ನು ಮೂಡಿಸುವ ಬಗ್ಗೆ CEE ರವರು ತಯಾರಿಸಿರುವ ಯೋಜನೆಯನ್ನು ಸಭೆಯಲ್ಲಿ ಮಂಡಿಸಲಾಯಿತು.

- ಈ ಬಾರಿ ಪ್ರಿಂಟ್ ಮೀಡಿಯಾ, ಸೋಷಿಯಲ್ ಮೀಡಿಯಾ ಮೂಲಕ ನಡೆಸಲು ಉದ್ದೇಶಿಸಲಾಗಿದ್ದು, ಈ ವಿಚಾರದಲ್ಲಿ 5 ವಿಚಾರಗಳನ್ನು ಅಂದರೆ ಅರಿಶಿನ ಗಣೇಶ ತಯಾರಿಕೆ, ಜಾಗೃತಿ ಮೂಡಿಸುವ ವಿಧಾನ, ಕರಪತ್ರ ಮತ್ತು ಭಿತ್ತಿಪತ್ರಗಳ ಮುದ್ರಣ, ಸಾಮಾಜಿಕ ಜಾಲತಾಣ, ದಾಖಲಾತೀಕರಣದಿಂದ ನಡೆಸುವ ಬಗ್ಗೆ ಸಭೆಯಲ್ಲಿ CEE ರವರು ವಿವರವಾಗಿ ಮಂಡಿಸಿದರು.

  ಈ ಜಾಗೃತಿಗೆ 26 ಅಂಶಗಳುಳ್ಳ ಆಯವ್ಯಯ (ಬಜೆಟ್) ರೂ.16.96 ಲಕ್ಷಕ್ಕೆ ಸಭೆಯಲ್ಲಿ ಮಂಡಿಸಲಾಯಿತು.

- ಗಣೇಶ ಮಾದರಿ ವಿನ್ಯಾಸ ಮತ್ತು ಸೆಲೆಬ್ರಿಟಿಗಳ ವಿವರಗಳ ಬಗ್ಗೆ ಸಭೆಯಲ್ಲಿ ಮಂಡಿಸಿ ವಿವರಿಸಲಾಯಿತು.

ಮೇಲಿನ ವಿಷಯಗಳನ್ನು ಸಭೆಯಲ್ಲಿ ಧೀರ್ಘವಾಗಿ ಚರ್ಚಿಸಿ ಮತ್ತು ಗಣೇಶನ ಹಬ್ಬದ ಆಚರಣೆಗೆ ಮುಂದಿನ ಕ್ರಮ ವಹಿಸಲು ಸದಸ್ಯ ಕಾರ್ಯದರ್ಶಿರವರಿಗೆ ಸಭೆಯು ಸಂಪೂರ್ಣ ಅಧಿಕಾರವನ್ನು ಮತ್ತು ಜವಾಬ್ದಾರಿಯನ್ನು ನೀಡಿತು.

ಈ ಪ್ರಸ್ತಾವನೆಯು ಒಂದ ಲಕ್ಷಕ್ಕೆ ಮೀರಿರುವುದರಿಂದ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಸಭೆಯಲ್ಲಿ ಅನುಮೋದನೆ ನೀಡಬೇಕಾಗಿರುತ್ತೆದೆಂದು ಸಭೆಗೆ ತಿಳಿಸಲಾಯಿತು. ಈ ನಿಬಂಧನೆಗೆ ಒಳಪಟ್ಟು ಕಾರ್ಯಕ್ರಮಗಳನ್ನು ನಡೆಸಲು ಸಭೆಯು ತೀರ್ಮಾನಿಸಿತು. } 9

2. **ಮಂಡಳಿಯಲ್ಲಿ ಪ್ರತಿ ವರ್ಷವೂ ಶಾಲೆಗಳಲ್ಲಿ ಪರಿಸರ ಜಾಗೃತಿಯನ್ನು ಮೂಡಿಸುವ ಕುರಿತು:**

ಪ್ರತಿ ವರ್ಷವೂ ಮಂಡಳಿಯಲ್ಲಿ ಕಳೆದ 8-9 ವರ್ಷಗಳಿಂದ ಮಕ್ಕಳಿಗೆ ಸಂಬಂಧಿಸಿದಂತೆ, ಶಾಲೆಗಳಲ್ಲಿ ಪರಿಸರ ಜಾಗೃತಿಯನ್ನು ಮೂಡಿಸುವ ಸಲುವಾಗಿ "ಪರಿಸರ ಮಿತ್ರ ಶಾಲೆ" ಜಿಲ್ಲಾಮಟ್ಟದ ಕೇಂದ್ರಗಳ ಸಹಾಯದಲ್ಲಿ ನಡೆಸಲಾಗುತ್ತಿದೆ. ಈ ಕಾರ್ಯಕ್ರಮವು ಮಂಡಳಿಯಲ್ಲಿ ಬಹಳ ಯಶಸ್ವಿಯಾಗಿದ್ದು, ಮುಂದುವರಿಸುವ ಸಂಕಲ್ಪವನ್ನು ಹೊಂದಿರುತ್ತದೆ ಎಂದು ಸಭೆಯಲ್ಲಿ ತಿಳಿಸಲಾಯಿತು.

ಸಭೆಯ ಸಂಚಾಲಕರು                                                  ಅಧ್ಯಕ್ಷರು